ಶ್ರೀ ಎಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ)

	ರೂ. (ಲಕ್ಷಗಳಲ್ಲಿ)
೧೯೮೪-೮೫	೪೧೭.೬
೧೯೮೫-೮೬	೪೯೩.೭
೧೯೮೬-೮೭	೫೧೮.೨೦

ಆ)

	ಲಾಭ	ನಷ್ಟ
೧೯೮೪-೮೫	೨.೨೩	—
೧೯೮೫-೮೬	೩.೦೯	—
೧೯೮೬-೮೭	೨.೯೫	—

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಕೃಷಿಕರ ಸಹಕಾರ ಮಾರಾಟ ಸಂಘದ ಪ್ರಗತಿಯ ಬಗ್ಗೆ

೧೩೧೧ (೨೨೧೧) ಶ್ರೀ ಬಿ. ಎಂ. ಇದಿನಬ್ಬ. (ಉಳ್ಳಾಲ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಕೃಷಿಕರ ಸಹಕಾರ ಮಾರಾಟದ ವ್ಯಾಪಾರ ವಹಿವಾಟು ಎಷ್ಟು ? ಮತ್ತು ಅದರ ಶಾಖೆಗಳ ಸಂಖ್ಯೆ ಎಷ್ಟು ? (ವರ್ಷವಾರು, ಶಾಖಾವಾರು ಪ್ರತ್ಯೇಕ ವಿವರ ನೀಡುವುದು)

ಆ) ಈ ಸಂಘವು ಸದರಿ ಸಾಲಿನಲ್ಲಿ ಗಳಿಸಿದ ಲಾಭವೆಷ್ಟು ? ಮತ್ತು ಅನುಭವಿಸಿದ ನಷ್ಟ ವೆಷ್ಟು ? (ವರ್ಷವಾರು, ಶಾಖಾವಾರು ಪ್ರತ್ಯೇಕ ವಿವರ ನೀಡುವುದು)

ಇ) ಸದರಿ ಸಾಲಿನಲ್ಲಿ ಈ ಸಂಘದಲ್ಲಿ ಹಣದ ದುರುಪಯೋಗ ಶೇಖರಿಸಿದ ಮಾಲಿನ ತಪಾಸಣೆ ಮತ್ತು ತೀರ್ಮಾನವಾಗಿದೆಯೇ ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಕೃಷಿಕರ ಸಹಕಾರ ಮಾರಾಟದ ವ್ಯಾಪಾರ ವಹಿವಾಟುಗಳ ವಿವರಗಳು ಈ ಕೆಳಗಿನಂತೆ ಇರುತ್ತದೆ.

ಸಾಲು	ಮೊಬಲಗು (ರೂ. ಲಕ್ಷಗಳಲ್ಲಿ)
೧೯೮೫-೮೬	೨೩೧೮. ೮೪
೧೯೮೬-೮೭	೧೮೦೬. ೬೧
೧೯೮೭-೮೮	೮೧೫. ೪೫
೧-೧೧-೮೭ರಿಂದ ೩೦-೪-೮೮ರವರೆಗೆ ಸಂಘದ ಶಾಖೆಗಳ ಸಂಖ್ಯೆ-೩ (ಪುತ್ತೂರು, ಸೂಳ್ಯ ಮತ್ತು ಬೆಳ್ತಂಗಡಿ)	

	ವರ್ಷವಾರು, ಶಾಖಾವಾರು ವಹಿವಾಟು ವಿವರಗಳು		
	೧೯೮೫-೮೬	೧೯೮೬-೮೭	೧೯೮೭-೮೮ (೧-೧೧-೮೭ ರಿಂದ ೩೦-೪-೮೮ ವರೆಗೆ)
ಮುಖ್ಯ ಕಛೇರಿ	೧೯೨೦. ೦೮	೧೨೭೪. ೬೭	೭೪೮. ೯೦
ಪುತ್ತೂರು ಶಾಖೆ	೩೯೮. ೭೬	೫೩೧. ೯೪	೬೬. ೫೫
ಸೂಳ್ಯ ಶಾಖೆ	ವಾರಾಟ ವ್ಯವಹಾರವಿರುವುದಿಲ್ಲ.		
ಬೆಳ್ತಂಗಡಿ ಶಾಖೆ	-"-		
ಒಟ್ಟು ವಹಿವಾಟು	೨೩೧೮. ೮೪	೧೮೦೬. ೬೧	೮೧೫. ೪೫

ಆ) ೧೯೮೫-೮೬ ಲಾಭ ೬, ೩೭, ೧೨೭-೦೦
೧೯೮೬-೮೭ ನಷ್ಟ ೩, ೪೦, ೭೮೮-೦೦
೧೯೮೭-೮೮ ಸಂಘದ ಹಣಕಾಸಿನ ವ್ಯವಹಾರ ವರ್ಷವು ನವೆಂಬರ್ ೧ನೇ ದಿನಾಂಕದಿಂದ ೧೯೮೮ರ ಅಕ್ಟೋಬರ್ ೩೧ರ ವರೆಗೂ ಇರುವುದರಿಂದ ಸದರಿ ಸಾಲಿನ ಪೂರ್ಣ ವ್ಯವಹಾರವು ನಡೆದ ನಂತರ ಲಾಭ ನಷ್ಟವನ್ನು ತಿಳಿಯಬೇಕಾಗಿರುವುದರಿಂದ, ಸದರಿ ಮಾಹಿತಿಯನ್ನು ನೀಡಲು ಸಾಧ್ಯವಾಗುವುದಿಲ್ಲ.

ಇ) ಸಂಘದ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರವರ (ನಿಯಮ ೪೪೧) ವರದಿಯ ಪ್ರಕಾರ ತಾ: ೧೯-೧೨-೮೭ ರಂದು ಸಂಘದ ಕ್ಯಾಷಿಯರ್‌ರವರಾದ ಶ್ರೀ ವಜ್ರಕುಮಾರ್‌ರವರು ೩೯, ೦೫೭-೬೩ನ್ನು ದುರುಪಯೋಗ ಮಾಡಿರುವುದು ಕಂಡು ಬಂದಿರುತ್ತದೆ. ಮಾಲಿನ ತಪಾಸಣೆ ಆಗಿರುತ್ತದೆ. ಮಾಲುಗಳಲ್ಲಿ ತೀರ್ಮಾನು ಅಥವಾ ದುರುಪಯೋಗ ಆಗಿರುವುದಿಲ್ಲ.

ದೇವಸ್ಥಾನಗಳ ಜೀರ್ಣೋದ್ಧಾರ

೧೩೧೨ (೧೯೧೫) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಧಾರ್ಮಿಕ ಮತ್ತು ದತ್ತಿ ಹಾಗೂ ನಿಯಂತ್ರಿತ ಮಾರುಕಟ್ಟೆ ಮತ್ತು ಖುಷ್ಕಿ ಜಮೀನು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು ?

ಆ) ಆ ಪೈಕಿ ಜೀರ್ಣಾವಸ್ಥೆಯಲ್ಲಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು ?

ಇ) ಸದರಿ ದೇವಸ್ಥಾನಗಳ ಜೀರ್ಣೋದ್ಧಾರ ಯಾವಾಗ ಮಾಡಲಾಗುವುದು ?

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಸ್ತೀಕ್ ಪಾವತಿಗೆ ಬಾಕಿ ಇರುವ ದೇವಸ್ಥಾನಗಳೆಷ್ಟು ? ಬಾಕಿ ಇರುವ ತಸ್ತೀಕ್ ಯಾವಾಗ ಕೊಟ್ಟು ಮುಗಿಸಲಾಗುವುದು, ಬಾಕಿ ಇರುವುದೆಲ್ಲೆಲ್ಲಿ (ವಿವರ ನೀಡುವುದು)

ಶ್ರೀ ಕೆ. ಅಮರನಾಥ ಶೆಟ್ಟಿ (ಮಾನ್ಯ ಧಾರ್ಮಿಕದತ್ತಿ ರಾಜ್ಯ ಸಚಿವರು).—

ಅ) ೩೩೦೪೪

ಆ) ಜೀರ್ಣಾವಸ್ಥೆಯಲ್ಲಿ ಇರುವ ದೇವಸ್ಥಾನಗಳ ಬಗ್ಗೆ ಸರ್ವೆ ಮಾಡಿಲ್ಲ, ಸಂಖ್ಯೆ ನೀಡಲು ಸಧ್ಯಕ್ಕೆ ವಿವರ ಲಭ್ಯವಿಲ್ಲ.

ಇ) ಜೀರ್ಣೋದ್ಧಾರ ಆಗತ್ಯವಿದ್ದಲ್ಲಿ ಭಕ್ತಾಧಿಗಳಿಂದ ಮತ್ತು ಸರ್ಕಾರದ ಧನಸಹಾಯದಿಂದ ಮಾಡಲಾಗುವುದು.

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಸ್ತೀಕ್ ಪಾವತಿಗೆ ೮೫೮ ದೇವಸ್ಥಾನಗಳು ಬಾಕಿ ಇವೆ. ಸದರಿ ದೇವಸ್ಥಾನಗಳ ತಸ್ತೀಕ್ ಸನದು ನವೀಕರಿಸಿದ ನಂತರ ಬಾಕಿಯನ್ನು ಪಾವತಿ ಮಾಡಲಾಗುವುದು. ಬಾಕಿ ಇರುವ ಸಂಸ್ಥೆಗಳ ತಾಲೂಕುವಾರು ಮಾಹಿತಿ ಲಗತ್ತಿಕರಿಸಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೯೧೫ಕ್ಕೆ ಲಗತ್ತು

ಕ್ರಮ ಸಂಖ್ಯೆ	ತಾಲ್ಲೂಕು	ದೇವಸ್ಥಾನಗಳ ಸಂಖ್ಯೆ	ಬಾಕಿ ಇರುವ ಹಣ
೧.	ಮಂಗಳೂರು	೮೨	೧೦, ೭೫೩-೦೦
೨.	ಕಾರ್ಕಳ	೨೩	೬, ೨೯೯-೦೦
೩.	ಸುಳ್ಯ	೫೪	೧೫, ೪೩೨-೦೦
೪.	ಉಡುಪಿ	೧೪೨	೨೬, ೬೫೯-೦೦
೫.	ಕುಂದಾಪುರ	೪೨೯	೧,೨೭, ೫೧೦-೦೦
೬.	ಪುತ್ತೂರು	೫೮	೧೫, ೮೮೧-೦೦
೭.	ಬಂಟ್ವಾಳ	೫೯	೭, ೦೫೩-೦೦
೮.	ಬೆಳ್ತಂಗಡಿ	೧೨	೩, ೬೨೭-೦೦
		೮೫೮	೨, ೧೩, ೨೧೪-೦೦